**ಕರ್ನಾಟಕ ಸರ್ಕಾರ**

**ಅರಣ್ಯ ಇಲಾಖೆ**

**ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಪಡೆ ಮುಖ್ಯಸ್ಥರು) ಇವರ ಕಛೇರಿ,**
**ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು–560003**

# ಪ್ರಕಟಣೆ

**ಅಧಿಸೂಚನೆ ಸಂಖ್ಯೆ: ಬಿ9–ನೇಮಕಾತಿ–ವಿವ–5/2019–20 ದಿನಾಂಕ: 01 –04–2020**

**ಅರಣ್ಯ ವ್ಯವಸ್ಥಾಪನಾಧಿಕಾರಿ (Forest Settlement Officer) ಹುದ್ದೆಗಳಿಗೆ**
**ಗುತ್ತಿಗೆ ಆಧಾರದ ಮೇಲೆ ನೇಮಕಾತಿ**

* * * * *

ಸರ್ಕಾರದ ಆದೇಶ ಸಂಖ್ಯೆ: ಅಪಜೀ 171 ಅಪಸೆ 2018, ಬೆಂಗಳೂರು ದಿನಾಂಕ: 31.07.2019 ರಂತೆ ಅರಣ್ಯ ಇಲಾಖೆಯಲ್ಲಿ **10 ಅರಣ್ಯ ವ್ಯವಸ್ಥಾಪನಾಧಿಕಾರಿ (Forest Settlement Officer) ಹುದ್ದೆಗಳಿಗೆ** ಗುತ್ತಿಗೆ ಆಧಾರದ ಮೇಲೆ ನೇಮಕಾತಿಗಾಗಿ ದಿನಾಂಕ: 20.08.2019 ಹಾಗೂ ದಿನಾಂಕ: 15.11.2019 ರಂದು ಅಧಿಸೂಚನೆ ಹೊರಡಿಸಲಾಗಿರುತ್ತದೆ. ಸದರಿ ಅಧಿಸೂಚನೆಯಲ್ಲಿ ನಿಗಧಿಪಡಿಸಿದ ಅರ್ಹತೆಯಂತೆ 7 ಹುದ್ದೆಗಳಿಗೆ ಮಾತ್ರ ಅರ್ಹ ಅರ್ಜಿದಾರರು ಲಭ್ಯವಾಗಿರುತ್ತದೆ. **ಉಳಿದಂತೆ 3 ಹುದ್ದೆಗಳ ಭರ್ತಿಗಾಗಿ ಮರು ನೇಮಕಾತಿ ಅಧಿಸೂಚನೆಯನ್ನು** ಈ ಪ್ರಕಟಣೆಯೊಂದಿಗೆ ಪ್ರಕಟಿಸಲಾಗಿದೆ.

ಈ ಪ್ರಕಟಣೆಯೊಂದಿಗೆ ಪ್ರಕಟಿಸಲಾದ ಅಧಿಸೂಚನೆಯ ಅನುಬಂಧದಲ್ಲಿನ ಕರ್ತವ್ಯಗಳನ್ನು ನಿರ್ವಹಿಸಲು **ನಿವೃತ್ತ ಕೆ.ಎ.ಎಸ್. ಅಧಿಕಾರಿಗಳಿಂದ (ನಿವೃತ್ತ ಸಹಾಯಕ ಆಯುಕ್ತರು (ಕಂದಾಯ))** ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಅರ್ಜಿಯನ್ನು ನೋಂದಾಯಿತ ಅಂಚೆ ಮುಖಾಂತರ ಹಾಗೂ ಮುದ್ದಾಂ ಆಗಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಅರಣ್ಯ ಪಡೆ ಮುಖ್ಯಸ್ಥರು), ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು – 560 003 ರವರ ಕಛೇರಿಗೆ ದಿನಾಂಕ: 20.04.2020 ರಿಂದ 11.05.2020 ರ ಅಪರಾಹ್ನ 4.30 ಗಂಟೆಯೊಳಗಾಗಿ ಸಲ್ಲಿಸಬಹುದಾಗಿರುತ್ತದೆ. ಈ ಕುರಿತು ಹೆಚ್ಚಿನ ಮಾಹಿತಿಗಾಗಿ ಇಲಾಖಾ website: www.aranya.gov.in ನ್ನು ನೋಡಬಹುದು.

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಅರಣ್ಯ ಪಡೆ ಮುಖ್ಯಸ್ಥರು)

ಸ್ಥಳ: ಬೆಂಗಳೂರು
ದಿನಾಂಕ: 01 .04.2020

ಕರ್ನಾಟಕ ಸರ್ಕಾರ

# ಅರಣ್ಯ ಇಲಾಖೆ

## ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಪಡೆ ಮುಖ್ಯಸ್ಥರು) ಇವರ ಕಛೇರಿ, ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು-560003

## ಅಧಿಸೂಚನೆ

**ಅಧಿಸೂಚನೆ ಸಂಖ್ಯೆ: ಬಿ9-ನೇಮಕಾತಿ-ವಿವ-5/2019-20 ದಿನಾಂಕ: 01 -04-2020**

**ಅರಣ್ಯ ವ್ಯವಸ್ಥಾಪನಾಧಿಕಾರಿ (Forest Settlement Officer) ಹುದ್ದೆಗಳಿಗೆ ಗುತ್ತಿಗೆ ಆಧಾರದ ಮೇಲೆ ನೇಮಕಾತಿ**

* * * * *

ಸರ್ಕಾರದ ಆದೇಶ ಸಂಖ್ಯೆ: ಅಪಜೀ 171 ಅಪಸೆ 2018, ಬೆಂಗಳೂರು ದಿನಾಂಕ: 31.07.2019 ರಂತೆ ಅರಣ್ಯ ಇಲಾಖೆಯಲ್ಲಿ **3 ಅರಣ್ಯ ವ್ಯವಸ್ಥಾಪನಾಧಿಕಾರಿ (Forest Settlement Officer) ಹುದ್ದೆಗಳಿಗೆ** ಗುತ್ತಿಗೆ ಆಧಾರದ ಮೇಲೆ ಈ ಅಧಿಸೂಚನೆಯೊಂದಿಗೆ ಲಗತ್ತಿಸಿರುವ ಅನುಬಂಧದಲ್ಲಿನ ಕರ್ತವ್ಯಗಳನ್ನು ನಿರ್ವಹಿಸಲು ನಿವೃತ್ತ ಕೆ.ಎ.ಎಸ್. ಅಧಿಕಾರಿಗಳ (ನಿವೃತ್ತ ಸಹಾಯಕ ಆಯುಕ್ತರು (ಕಂದಾಯ)) ಸೇವೆಯನ್ನು **ತಾತ್ಕಾಲಿಕವಾಗಿ ಗರಿಷ್ಠ 2 ವರ್ಷಗಳ ಅವಧಿಗೆ** ನೇಮಕ ಮಾಡಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ.

1. **ಅರ್ಜಿ ಸಲ್ಲಿಸುವ ವಿಧಾನ:**

   ಅರ್ಜಿ ಮತ್ತು ಅಧಿಸೂಚನೆಯನ್ನು ಇಲಾಖಾ ವೆಬ್‌ಸೈಟ್: www.aranya.gov.in ನಲ್ಲಿ ಪ್ರಕಟಪಡಿಸಲಾಗುವುದು. ಅರ್ಜಿಯನ್ನು ನೋಂದಾಯಿತ ಅಂಚೆ ಮುಖಾಂತರ ಹಾಗೂ ಮುದ್ದಾಂ ಆಗಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಅರಣ್ಯ ಪಡೆ ಮುಖ್ಯಸ್ಥರು), ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು – 560 003 ರವರ ಕಛೇರಿಗೆ ದಿನಾಂಕ: 20.04.2020 ರಿಂದ 11.05.2020 ರಂದು ಅಪರಾಹ್ನ 4.30 ಗಂಟೆಯವರೆಗೆ ಸಲ್ಲಿಸಬಹುದಾಗಿರುತ್ತದೆ.

   ಅರ್ಜಿದಾರರು **ಸಹಾಯಕ ಆಯುಕ್ತರು (ಕಂದಾಯ) ಈ ಹುದ್ದೆಯಲ್ಲಿ ಸೇವೆ ಸಲ್ಲಿದ ಕುರಿತು ಸೇವಾ ವಿವರಗಳ ಮಾಹಿತಿ ಹಾಗೂ ವಯೋಮಿತಿಯ ಕುರಿತು ಅಧಿಕೃತ ದಾಖಲೆಯನ್ನು** ಅರ್ಜಿಯೊಂದಿಗೆ ಲಗತ್ತಿಸಿ ಸಲ್ಲಿಸುವುದು.

2. **ವೇತನ:** ಗುತ್ತಿಗೆ ಆಧಾರದಲ್ಲಿ ನೇಮಕವಾದ ಅರಣ್ಯ ವ್ಯವಸ್ಥಾಪನಾಧಿಕಾರಿಗೆ ಮಾಸಿಕ ವೇತನ ರೂ. 50,000/- ಗಳನ್ನು ನಿಗಧಿಪಡಿಸಲಾಗಿದೆ ಹಾಗೂ ಸದರಿ ಹುದ್ದೆಗೆ ನೇಮಿಸಿಕೊಳ್ಳಲಾಗುವವರಿಗೆ ಒಂದು ವಾಹನವನ್ನು ಹೊರಗುತ್ತಿಗೆ ಆಧಾರ ಅಥವಾ ಬಾಡಿಗೆ ಆಧಾರದ ಮೇಲೆ ಒದಗಿಸಲಾಗುವುದು.

3. **ಹುದ್ದೆಗಳ ವಿವರ:**

| ಕ್ರಸಂ. | ಕರ್ತವ್ಯ ನಿರ್ವಹಿಸುವ ಕೇಂದ್ರಸ್ಥಾನ | ಕಾರ್ಯ ವ್ಯಾಪ್ತಿ | ಹುದ್ದೆಗಳ ಸಂಖ್ಯೆ |
|---|---|---|---|
| 1 | ಮಂಡ್ಯ | ಮಂಡ್ಯ<br>ರಾಮನಗರ | 1 |
| 2 | ಹಾಸನ | ಹಾಸನ<br>ತುಮಕೂರು<br>ಮಧುಗಿರಿ<br>ಬೆಂಗಳೂರು ದಕ್ಷಿಣ<br>ಬೆಂಗಳೂರು ಗ್ರಾಮಾಂತರ | 1 |
| 3 | ರಾಯಚೂರು | ರಾಯಚೂರು<br>ಯಾದಗಿರಿ | 1 |
| | | **ಒಟ್ಟು** | **3** |

4. **ಅರ್ಹತೆ:**

ಅರ್ಜಿದಾರರು **ಸಹಾಯಕ ಆಯುಕ್ತರು (ಕಂದಾಯ) ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸಿ ನಿವೃತ್ತರಾಗಿರಬೇಕು** ಹಾಗೂ ಈ ಕೆಳಕಂಡ ವಿಷಯಗಳ ಕುರಿತು ಪರಿಣಿತರಾಗಿರಬೇಕು.

1. ಅರಣ್ಯ ಮೋಜಣಿ ಹಾಗೂ ಗಡಿರೇಖೆ ಗುರುತಿಸುವಿಕೆ ಮತ್ತು ನಕಾಶೆ ತಯಾರಿಕೆ
2. ಭೂ ವಿವಾದಗಳ ಕುರಿತಂತೆ ಸಿವಿಲ್ ನ್ಯಾಯಾಲಯದಂತೆ ಕರ್ತವ್ಯ ನಿರ್ವಹಿಸಬೇಕು.
3. Theodolite Survey ಮತ್ತು GPS Survey ಕುರಿತಂತೆ ಪರಿಣಿತರಾಗಿರಬೇಕು.

ಕರ್ತವ್ಯ ನಿರ್ವಹಿಸುವ ಕೇಂದ್ರಸ್ಥಾನದ ಜಿಲ್ಲಾ ವ್ಯಾಪ್ತಿಯ ಅರ್ಜಿದಾರರಿಗೆ ಮೊದಲ ಆದ್ಯತೆಯನ್ನು ನೀಡಲಾಗುವುದು.

5. **ವಯೋಮಿತಿ:**

ಅರ್ಜಿಯನ್ನು ಆಹ್ವಾನಿಸಿ ಜಾರಿ ಮಾಡಲಾಗಿರುವ ಈ **ಅಧಿಸೂಚನೆಯ ದಿನಾಂಕಕ್ಕೆ ಅರ್ಜಿದಾರರು 70 ವರ್ಷ** ವಯಸ್ಸನ್ನು ಮೀರಿರಬಾರದು.

6. **ಆಯ್ಕೆ ವಿಧಾನ:** ಸಂದರ್ಶನ ಪರೀಕ್ಷೆ

ಅರಣ್ಯ ವ್ಯವಸ್ಥಾಪನಾಧಿಕಾರಿ (Forest Settlement Officer) ಹುದ್ದೆಗೆ ಆಸಕ್ತಿ ಉಳ್ಳವರು ನಿಗಧಿಪಡಿಸಲಾದ ದಿನಾಂಕದೊಳಗೆ ನೋಂದಾಯಿತ ಅಂಚೆ ಮೂಲಕ ಅಥವಾ ಮುದ್ದಾಂ ಮೂಲಕ ಅರ್ಜಿಯನ್ನು ಸಲ್ಲಿಸಲು ತಿಳಿಸಲಾಗಿದೆ.

ಬೆಂಗಳೂರು,
ದಿನಾಂಕ: 01 –04–2020

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಅರಣ್ಯ ಪಡೆ ಮುಖ್ಯಸ್ಥರು)

# ಅನುಬಂಧ

## ಅರಣ್ಯ ವ್ಯವಸ್ಥಾಪನಾಧಿಕಾರಿ (Forest Settlement Officer) ಹುದ್ದೆಯ ಕರ್ತವ್ಯದ ಸಂಕ್ಷಿಪ್ತ ವಿವರ

1. ಕರ್ನಾಟಕ ಅರಣ್ಯ ಕಾಯ್ದೆ ಕಲಂ – 4 ರಡಿ ಅಧಿಸೂಚಿಸಿರುವ ಪ್ರಕರಣಗಳಲ್ಲಿ ಅಧಿಸೂಚಿಸಿದ ಭೂ ಪ್ರದೇಶದ ಭೂ ಮಾಪನಾ ಮಾಡುವುದು, ಗಡಿರೇಖೆ ಗುರುತಿಸುವುದು ಮತ್ತು ಅದರ ಭೂಪಟವನ್ನು ತಯಾರಿಸುವ ಕುರಿತು ಕ್ರಮ ಕೈಗೊಳ್ಳುವುದು.

2. ದಾವೆಗಳ ಅಧಿವಿಚಾರಣೆಯಲ್ಲಿ ಸಿವಿಲ್ ನ್ಯಾಯಾಲಯದಂತೆ ವಿಚಾರಣೆ ನಡೆಸಿ, ಪ್ರಕರಣವನ್ನು ಇತ್ಯರ್ಥಗೊಳಿಸುವುದು.

3. ಸರ್ಕಾರವು ಸ್ವಾಧೀನತೆಯ ಹಕ್ಕನ್ನು ಕಲಂ – 3 ರಂತೆ ಹೊಂದಿರುವ ಪ್ರದೇಶಕ್ಕೆ ರಾಜ್ಯ ಸರ್ಕಾರವು ಕರ್ನಾಟಕ ಅರಣ್ಯ ಕಾಯ್ದೆ 1963 ರ ಕಲಂ – 4 ರಡಿ ಪ್ರಾಥಮಿಕ ಅಧಿಸೂಚನೆಯನ್ನು ಹೊರಡಿಸಿರುತ್ತದೆ. ಸದರಿ ಅಧಿಸೂಚನೆಯಲ್ಲಿ ಕಲಂ – 4(1)(ಸಿ) ರಂತೆ ಸದರಿ ಪ್ರದೇಶದ ಹಕ್ಕು ಬಾದ್ಯತೆಗಳನ್ನು ಅಥವಾ ಯಾವುದೇ ಖಾಸಗಿ ವ್ಯಕ್ತಿಯ ಹಕ್ಕನ್ನು, ಅರಣ್ಯ ಉತ್ಪನ್ನದ ಹಕ್ಕನ್ನು ಮತ್ತು ಮೀಸಲು ಅರಣ್ಯ ರಚನೆಯ ವಿಚಾರವಾಗಿ ಅರಣ್ಯ ಕಾಯ್ದೆ ಮತ್ತು ನಿಯಮಗಳಲ್ಲಿ ವಿವರಿಸಿರುವಂತೆ ಕಾನೂನಿನ್ವಯ ಕ್ರಮ ತೆಗೆದುಕೊಳ್ಳುವ ಬಗ್ಗೆ ಕಾರ್ಯ ನಿರ್ವಹಿಸುವುದು.

4. ಅರಣ್ಯ ವ್ಯವಸ್ಥಾಪನಾಧಿಕಾರಿಯವರು ಭೂ ಸ್ವಾಧೀನ ಕಾಯ್ದೆ ಹಾಗೂ ರಾಜ್ಯ ವಿವಿಧ ಭೂ ಸ್ವಾಧೀನ ಕಾಯ್ದೆಗಳಡಿಯಲ್ಲಿ (ಕರ್ನಾಟಕ ಅರಣ್ಯ ಕಾಯ್ದೆ 1963, ಕರ್ನಾಟಕ ಅರಣ್ಯ ನಿಯಮಗಳು 1969, ವನ್ಯಜೀವಿ ಸಂರಕ್ಷಣಾ ಕಾಯ್ದೆ 1972, ವನ್ಯಜೀವಿ ರಕ್ಷಣಾ ನಿಯಮಗಳು 1973, ಕರ್ನಾಟಕ ಅರಣ್ಯ ಕೈಪಿಡಿ 1980, ಅರಣ್ಯ ಸಂರಕ್ಷಣಾ ಕಾಯ್ದೆ 1980, ಅರಣ್ಯ (ಸಂರಕ್ಷಣಾ) ನಿಯಮಗಳು 1981) ಗಳಲ್ಲಿ ಪ್ರದತ್ತವಾದ ಶಾಸನಬದ್ಧ ಅಧಿಕಾರವನ್ನು ಚಲಾಯಿಸಲು ಅಧಿಕಾರ ಪ್ರತ್ಯಾಯೋಜಿಸಲಾಗಿದೆ.

5. ಪ್ರಸ್ತುತ ಈಗಾಗಲೇ ಸರ್ಕಾರವು ಕರ್ನಾಟಕ ಅರಣ್ಯ ಕಾಯ್ದೆ 1963 ರ ಸೆಕ್ಷನ್ – 4 ರಡಿ ಅಧಿಸೂಚನೆ ಹೊರಡಿಸಿರುವ ಪ್ರದೇಶಗಳು ಕಳೆದ 2 – 3 ದಶಕಗಳಿಂದ ಅರಣ್ಯ ವ್ಯವಸ್ಥಾಪನಾ ಪ್ರಕ್ರಿಯೆಗೆ ಒಳಪಟ್ಟು, ಕಲಂ – 17 ರಡಿ ಅಂತಿಮವಾಗಿ ಅಧಿಸೂಚನೆಯಾಗದೆ ರಾಜ್ಯ ವ್ಯಾಪಿ ಬಾಕಿ ಉಳಿದಿರುವ ಪ್ರಕರಣಗಳನ್ನು ನಿಗಧಿತ ಕಾಲ ಮಿತಿಯೊಳಗೆ ಇತ್ಯರ್ಥಗೊಳಿಸಲು ಸೂಕ್ತ ಕ್ರಮ ಕೈಗೊಳ್ಳುವುದು ಹಾಗೂ ಇಲಾಖೆಯು ಈ ಬಗ್ಗೆ ಕಾಲ ಕಾಲಕ್ಕೆ ನಿಗಧಿಪಡಿಸುವ ಇತರೆ ಕರ್ತವ್ಯಗಳನ್ನು ನಿರ್ವಹಿಸುವುದು.

ಬೆಂಗಳೂರು,
ದಿನಾಂಕ: 01 –04–2020

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಅರಣ್ಯ ಪಡೆ ಮುಖ್ಯಸ್ಥರು)